ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ   ದಿನಾಂಕ : DATE : 15/06/2019

# ಹೆಜ್ಜೆ ಹಿಂದಿಟ್ಟ ಸರ್ಕಾರ

## ಜಿಂದಾಲ್‌ಗೆ ಭೂಮಿ ಪರಭಾರೆ ಕುರಿತು ಸಮಿತಿಗೆ ನಿರ್ಧಾರ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜಿಂದಾಲ್ ಕಂಪನಿಗೆ 3666 ಎಕರೆ ಭೂಮಿ ಪರಭಾರೆ ಮಾಡಲು ಮುಂದಾಗಿದ್ದ ರಾಜ್ಯ ಸರ್ಕಾರ, ಪ್ರತಿಪಕ್ಷ ಹಾಗೂ ಮೈತ್ರಿಪಕ್ಷದ ಕೆಲ ನಾಯಕರ ಒತ್ತಡಕ್ಕೆ ಮಣಿದು ತನ್ನ ನಿರ್ಧಾರದಿಂದ ಒಂದು ಹೆಜ್ಜೆ ಹಿಂದಿಟ್ಟಿದೆ.

» **ವರದಿ ಪಡೆದು ನಿರ್ಧಾರ ಕೈಗೊಳ್ಳಲು ತೀರ್ಮಾನ**

ಜಿಂದಾಲ್ ಭೂಮಿ ವಿಚಾರವಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ನಡೆಸಿದ್ದರೆ, ಮೈತ್ರಿ ಪಕ್ಷದ ನಾಯಕರಲ್ಲೂ ಆಕ್ಷೇಪಗಳು ಹೊರಹೊಮ್ಮಿದ್ದವು. ಹೀಗಾಗಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಸಂಪುಟ ಉಪ ಸಮಿತಿ ರಚಿಸಿ, ಅದರ ಅಭಿಪ್ರಾಯವನ್ನು ಪರಿಗಣಿಸಲು ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಬಗ್ಗೆ ಮಾಹಿತಿ ನೀಡಿದ ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ, 'ಜಿಂದಾಲ್‌ಗೆ ಜಮೀನು ಲೀಸ್‌ನ್ನು ಕ್ರಯವಾಗಿ ಪರಿವರ್ತಿಸಲು ಹಿಂದಿನ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ ಜನರಲ್ಲಿ ತಪ್ಪುಭಾವನೆ ಮೂಡಬಾರದೆಂಬ ಕಾರಣಕ್ಕೆ ಸಂಪುಟ ಉಪ ಸಮಿತಿಯಿಂದ ಅಭಿಪ್ರಾಯ ಪಡೆದು ನಿರ್ಧಾರ ಮಾಡಲು ತೀರ್ಮಾನ ಕೈಗೊಳ್ಳಲಾಯಿತು' ಎಂದರು. ಸಂಪುಟ ಉಪ ಸಮಿತಿ ರಚನೆಯನ್ನು ಮುಖ್ಯಮಂತ್ರಿ ವಿವೇಚನೆಗೆ ಬಿಡಲಾಗಿದೆ. ಆದಷ್ಟು ಬೇಗ ವರದಿ ಪಡೆದು ನಿಲುವು ಸ್ಪಷ್ಟಪಡಿಸಲಾಗುತ್ತದೆ. ಸಮಿತಿಯಲ್ಲಿ ತಮ್ಮನ್ನು ಸೇರಿಸದಂತೆ ಕೈಗಾರಿಕೆ ಸಚಿವ ಕೆ.ಜೆ. ಜಾರ್ಜ್ ಮನವಿ ಮಾಡಿದ್ದಾರೆ ಎಂದೂ ಅವರು ಹೇಳಿದರು.



### ಸಂಪುಟದಲ್ಲೇ ಭಿನ್ನ ಅಭಿಪ್ರಾಯ

ಜಿಂದಾಲ್‌ಗೆ ಭೂಮಿ ನೀಡಿಕೆ ವಿಚಾರದಲ್ಲಿ ಸಂಪುಟ ಸದಸ್ಯರಲ್ಲಿ ಭಿನ್ನ ಅಭಿಪ್ರಾಯ ವ್ಯಕ್ತವಾಗಿದೆ. ಡಿ.ಕೆ. ಶಿವಕುಮಾರ್, ಕೆ.ಜೆ. ಜಾರ್ಜ್ ಮತ್ತಿತರರು ಭೂಮಿ ಕೊಡುವುದೇ ಸೂಕ್ತ ಎಂದು ವಾದಿಸಿದ್ದಾರೆ. ಇದರಿಂದ ಜನರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆಂದು ಕೆಲವು ಪ್ರಮುಖ ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

### ಸಂಪುಟದ ಇತರ ನಿರ್ಣಯಗಳು

■ ಸರ್ಕಾರಿ ಕಾಲೇಜಿನ 1,09,9016 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ■ ಫಾರೆಸ್ಟ್ ಗಾರ್ಡ್ ನೇಮಕದಲ್ಲೂ ಶೇ.30 ಅರಣ್ಯವಾಸಿಗಳಿಗೆ ಮೀಸಲು ■ ಗ್ರಾಮೀಣ ಆದ್ಯತಾ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿ ಸುಮಾರ್ಗ ಯೋಜನೆ ಜಾರಿ ■ ಇನ್ವೆಸ್ಟ್ ಕರ್ನಾಟಕ ಸದ್ಯಕ್ಕಿಲ್ಲ ■ ಮುಜರಾಯಿ ದೇವಸ್ಥಾನದ 3628 ನೌಕರರಿಗೆ ವೇತನ ಪರಿಷ್ಕರಣೆ

### ಪರ-ವಿರೋಧ ನಿಲುವು

ರಾಜ್ಯದಲ್ಲಿ ಜಿಂದಾಲ್‌ನಿಂದ 45 ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗಿದೆ. 4-5 ಸಾವಿರ ಕೋಟಿ ರೂಪಾಯಿ ತೆರಿಗೆ ಬರುತ್ತಿದೆ. ಈ ಹಂತದಲ್ಲಿ ಭೂಮಿ ಕೊಡುವುದನ್ನು ನಿರಾಕರಿಸಿದರೆ ಇತರೆ ಬಂಡವಾಳ ಹೂಡಿಕೆದಾರರ ಮೇಲೆ ಪರಿಣಾಮ ಬೀರಲಿದೆ. ಆದರೆ, ಭೂಮಿ ಕೊಟ್ಟರೆ ಜನರಲ್ಲಿ ಸರ್ಕಾರದ ಬಗ್ಗೆ ಬೇರೆ ಸಂದೇಶ ಹೋಗುತ್ತದೆ. ತೀರ್ಮಾನ ಪುನರ್ ವಿಮರ್ಶೆ ಅಗತ್ಯವಿದೆ ಎಂದು ಕೆಲ ಸಚಿವರು ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಹಾಲಿ ಆ ಜಾಗದಲ್ಲಿ ಕಾರ್ಖಾನೆಗಳಿವೆ, ಉದ್ಯೋಗ ಸೃಷ್ಟಿಯಾಗಿದೆ. ಭೂಮಿ ನೀಡುವುದಾಗಿ ಈ ಹಿಂದೆಯೇ ಒಡಂಬಡಿಕೆಯಾಗಿದೆ. ಈಗ ನಾವೇ ಈ ಹಂತದಲ್ಲಿ ಷರತ್ತು ಹಾಕುವುದು ಅಥವಾ ಒಡಂಬಡಿಕೆ ಮುರಿದುಕೊಂಡರೆ ರಾಜ್ಯಕ್ಕೆ ಬರುವ ಬಂಡವಾಳದ ಹೂಡಿಕೆ ಮೇಲೆಯೇ ಪರಿಣಾಮ ಬೀರಲಿದೆ. ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಹೊರಗೆ ಕಳಿಸುವುದು ಸೂಕ್ತವಲ್ಲ ಎಂಬ ವಾದ ಹಲವು ಸಚಿವರದ್ದಾಗಿದೆ. ಒಂದು ಹಂತದಲ್ಲಿ ಈ ನಿರ್ಧಾರ ಪುನರ್ ವಿಮರ್ಶೆ ಮಾಡುವುದಾದರೆ ಈ ಹಿಂದೆ ಕೈಗೊಂಡ ಅನೇಕ ನಿರ್ಧಾರಗಳೂ ಪುನರ್ ಪರಿಶೀಲನೆಗೊಳಪಡಲಿ ಎಂಬ ಖಡಕ್ ಪ್ರತಿಕ್ರಿಯೆಯೂ ವ್ಯಕ್ತವಾಗಿದೆ. ಅಂತಿಮವಾಗಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಸಂಪುಟ ಉಪ ಸಮಿತಿಗೆ ವಹಿಸುವುದು ಸೂಕ್ತ ಎಂಬ ನಿಲುವಿಗೆ ಬಂದರು.